SRI B. SUBBAIAH SHETTY.—In the other House there was a demand that some inquiry regarding the working of the Bangalore University should be held. Under Section 61, Chapter XI, subject to correction, of the Universities Act, there is a provision for inquiring into the entire working of the University by appointing a Review Commission. So, the Government are requesting the Chancellor to constitute such a Review Commission and to inquire into the entire working of the University and we are also conveying to the Chancellor the things that have transpired in the other House.

ಶ್ರೀ ಪಿ. ರಾಮ್‌ದೇವ್.— ಏನು ವಿಚಾರಣೆ ಮಾಡಬೇಕೆಂದು ಹೊರಟಿದ್ದೀರಿ ಇದು ಯೂನಿವರ್ಸಿಟಿಯಲ್ಲಿ ಇತ್ತೀಚೆಗೆ ನಡೆದ ಘಟನೆಗಳ ಬಗ್ಗೆಯೋ ಅಥವಾ ಯೂನಿವರ್ಸಿಟಿ ಪ್ರಾರಂಭದಿಂದ ಮಾಡುತ್ತೀರೊ? ಇದಕ್ಕೆ ಬಾಲಗ್ರಹ ಪೀಡಿತವಾಗಿರುವುದರಿಂದ ಹಿಂದಿನಿಂದಲೂ ವಿಚಾರಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

SRI B. SUBBAIAH SHETTY.—As contemplated under Chapter XI, it will be conducted.

(*ii*) *re: Suicide of a teenaged girl due to molestation by a doctor at Victoria Hospital, Bangalore.*

SMT. S. PRAMILA (Chamarajpet).—Sir, I wish to raise a matter under rule 312 regarding the alleged suicide committed by Smt. Leelavathi due to molestation by Dr. Thimmareddy in Victoria Hospital, Bangalore.

SRI M. MALLAPPA (Minister for Health).—Sir, I wish to make the following statement on behalf of the Chief Minister.

On 28th March 1978 at 5-30 P. M one Srinivasa, S/o Papaiah resident of No. 8 Vayapurigalli, Kalasipalyam, informed the Kalasipalyam Police that at about 2-30 P. M. he noticed smoke from upstairs and when he went up along with his neighbours they found his elder sister Padmavathi @ Leelavathi, aged 23 years, dead. She had burnt herself after pouring Kerosene oil on her body. There was a Kerosene stove by her side. (According to him she was having some mental trouble and so she was going to Victoria Hospital very often.) On this statement a case at Crime No. 8/78 under section 174 Criminal Procedure Code was registered as Unnatural Death. The Police took up the investigation and the Inquest was conducted over the dead body. The Post-mortem was done on 29th March 1978 and the Medical Officer has opined that the death was due to shock as a result of burns. On 29th March 1978, Srinivasa, brother of the deceased Leelavathi produced a letter written in Kannada by the deceased. The letter was dated 26th March 1978 addressed to the Commissioner of Police, Bangalore and copied to Police Inspector

Chamrajpet and Dr. K. Thimmareddy, Room No. 42, Doctors quarters, Bangalore-2. In the letter she had stated that from the first time she went to Victoria Hospital on 14th February 1977, when her father was admitted as an inpatient, Dr. Thimmareddy enticed her and pretended as if he was in love with her. On 3rd March 1977 he promised to marry her. Later on also they have been very close to each other. It was only a month back when some proposals came for her marriage and then she asked him to marry her, Dr. Thimmareddy refused to marry her. She wrote this complaint to the Commissoiner of Police for proper enquiry regarding the action of Dr. Thimmareddy.

In the meantime, as Dr. Thimmareddy had committed suicide in a hotel room on 27th March 1978, no further action could be taken by the Police. Both the cases are under investigation, pending final disposal.

೨-೦೦ ಪಿ. ಎಂ.

ಶ್ರೀಮತಿ ಎಸ್. ಪ್ರಮಿಳಾ.—ಸಭಾಧ್ಯಕ್ಷರೇ, ಮಾನ್ಯ ಮಂತ್ರಿಗಳು ತಮ್ಮ ಹೇಳಿಕೆಯಲ್ಲಿ ಒಂದು ವಿಷಯವನ್ನು ತಿಳಿಸಿದ್ದಾರೆ. ಏನೆಂದರೆ, ಸತ್ತಿರತಕ್ಕ ಹುಡುಗಿಗೆ ಮೆಂಟಲ್ ಟ್ರಬಲ್ ಇತ್ತು ಆದ್ದರಿಂದ ಕೇರೋಸಿನ್ ಆಯಿಲ್ ಸುರಿದುಕೊಂಡು ಸತ್ತು ಹೋಗಿದ್ದಾಳೆ ಎಂದು, ಆದರೆ ಆಕೆಯೇ ಪೋಲೀಸಿನವರಿಗೆ ಬರೆದಿರತಕ್ಕ ಪತ್ರವನ್ನು ಯಾರಾದರೂ ಓದಿದರೆ ಆಕೆಗೆ ನಿಜವಾಗಿಯೂ ಮೆಂಟಲ್ ಟ್ರಬಲ್ ಇತ್ತೋ ಅಥವಾ ಆಕೆಯನ್ನು ಆ ಸ್ಥಿತಿಗೆ ತಂದರೋ ಎಂದು ಅರ್ಥವಾಗುತ್ತದೆ. ಆ ಪತ್ರವನ್ನು ಓದಿದರೆ ನಮಗೆ ಕಣ್ಣಲ್ಲಿ ನೀರು ಬರುತ್ತದೆ. ೧೪ನೇ ಫೆಬ್ರುವರಿ ೧೯೭೮ ರಲ್ಲಿ ಆ ಹುಡುಗಿಯ ತಂದೆಗೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಆಪರೇಷನ್ ಮಾಡಿದಾಗ ಆತನನ್ನು ನೋಡಿಕೊಳ್ಳುವುದಕ್ಕೆ ಈ ಹುಡುಗಿ ಹೋದರೆ, ಡಾಕ್ಟರುಗಳು ಇವಳನ್ನು ಪಿ. ಜಿ. ಕ್ವಾರ್ಟರ್ಸ್‌ಗೆ ಕರೆದುಕೊಂಡುಹೋಗಿ ಬಲವಂತವಾಗಿ ಸಂಭೋಗ ಮಾಡಿ ಈ ದುರಂತ ಮರಣಕ್ಕೆ ಕಾರಣರಾಗಿದ್ದಾರೆ. ಅವಳು ಸ್ಲೀಪಿಂಗ್ ಟ್ಯಾಬ್ಲೆಟ್ಸ್ ತೆಗೆದುಕೊಂಡು ಪ್ರಾಣ ಬಿಡಬೇಕಾದ ಸ್ಥಿತಿಗೆ ಅಲ್ಲಿಯ ಡಾಕ್ಟರುಗಳು ತಂದಿದ್ದಾರೆ, ಈ ವಿಷಯ ಆಕೆಯೇ ಬರೆದಿರತಕ್ಕ ಪತ್ರದಲ್ಲಿದೆ. ಆದರೂ ಕೂಡ ಮಾನ್ಯ ಮಂತ್ರಿಗಳು ಈ ವಿಷಯವನ್ನು ಮುಚ್ಚಿಟ್ಟು ಬಿಟ್ಟಿದ್ದಾರೆ. ಬೆಂಗಳೂರಿನಲ್ಲಿರುವ ವಿಕ್ಟೋರಿಯಾ ಆಸ್ಪತ್ರೆಯಲ್ಲಿರುವ ಸ್ಥಿತಿ ಗತಿ ಈ ರೀತಿಯಾದರೆ ಆಲ್ಲಿಗೆ ಬೇರೆ ಹೆಣ್ಣು ಮಕ್ಕಳುಗಳು ಹೋಗುವುದಕ್ಕೆ ಭಯ ಬೀಳತಕ್ಕ ಸ್ಥಿತಿ ಬರುತ್ತದೆ. ಅಲ್ಲಿಯ ಡಾಕ್ಟರುಗಳು ಯಾವ ರೀತಿಯಾಗಿ ಪೇಷಂಟ್ಸ್‌ಗಳನ್ನು ನೋಡಿಕೊಳ್ಳುತ್ತಾರೆ, ಪೇಷಂಟ್ಸ್‌ಗಳನ್ನು ನೋಡಿಕೊಳ್ಳುವುದು ಇರಲಿ, ಪೇಷಂಟ್ಸ್‌ಗಳನ್ನು ನೋಡುವುದಕ್ಕೆ ಹೋದವರನ್ನು ಈ ರೀತಿಯಾಗಿ ದುರ್ಮರಣಕ್ಕೆ ಕಾರಣರಾಗುತ್ತಿದ್ದಾರೆಎನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿದುಕೊಳ್ಳಬೇಕು. ಆಕೆಯೇ ಬರೆದಿರತಕ್ಕ ಪತ್ರದಲ್ಲಿ ಇವಳನ್ನು ಬಲವಂತವಾಗಿ ಪಿ. ಜಿ. ಕ್ವಾರ್ಟರ್ಸ್‌ಗೆ ಎಳೆದುಕೊಂಡು ಹೋಗಿ ಬಾಗಿಲನ್ನು ಭದ್ರಮಾಡಿ, ಇವಳು ನನಗೆ ಮದುವೆಯಾಗಿಲ್ಲ ಎಂದು ಎಷ್ಟು ಹೇಳಿದರೂ ಕೇಳದೆ ಎರಡು ಮೂರು ಬಾರಿ ಅಕ್ರಮ ಸಂಭೋಗಮಾಡಿದ್ದಾರೆ. ಅಲ್ಲದೆ ಇವಳಿಗೆ, ರಿಜಿಸ್ಟರ್ ಮದುವೆ ಮಾಡಿಕೊಳ್ಳುತ್ತೇವೆಂದು ಹೇಳಿ ಮೋಸ ಮಾಡಿ ದುರ್ಮರಣಕ್ಕೆ ಕಾರಣರಾಗಿದ್ದಾರೆ. ಮಾನ್ಯ ಮಂತ್ರಿಗಳು ಅವಳಿಗೆ ಮೆಂಟಲ್ ಟ್ರಬಲ್ ಇತ್ತು ಎಂದು ಹೇಳಿದ್ದಾರೆ. ಇದು ಸತ್ಯಕ್ಕೆ ದೂರವಾದ ವಿಷಯ. ಇದು ಬಹಳ ಗಂಭೀರವಾದ ಪ್ರಶ್ನೆ. ಸರ್ಕಾರಿ ನೌಕರರಾಗಿರತಕ್ಕವರು ಈ ರೀತಿಯಾಗಿ ಹೆಣ್ಣು ಮಕ್ಕಳುಗಳನ್ನು ಕರೆದುಕೊಂಡು ಹೋಗಿ ಅಕ್ರಮವಾಗಿ ಸಂಭೋಗ ಮಾಡಿರುವುದು, ಮತ್ತು ಆವಳನ್ನು ದುರ್ಮರಣಕ್ಕೆ ಆಹುತಿಯಾಗುವಂಥ ಸ್ಥಿತಿಗೆ ತಂದರೆ, ಇದರ ಬಗ್ಗೆ ನಾವು ಗಂಭೀರವಾಗಿ ಯೋಚನೆ ಮಾಡಬೇಕಾಗುತ್ತದೆ. ಒಬ್ಬ ಬೋವಿ ಜನಾಂಗದ, ಹಿಂದುಳಿದ ವರ್ಗದ ಹೆಣ್ಣುಮಗಳಿಗೆ ಈ ಪರಿಸ್ಥಿತಿ ಬಂದಾಗ ಮಾನ್ಯ ಮಂತ್ರಿಗಳು ಇದರ ಬಗ್ಗೆ ತಮ್ಮ ಹೆಚ್ಚಿನ ಗಮನವನ್ನು ಹರಿಸಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಎರಡನೆಯದಾಗಿ, ಆಕೆಗೆ ಮೆಂಟಲ್ ಟ್ರಬಲ್ ಇತ್ತು ಎನ್ನುವುದಕ್ಕೆ ಯಾವ ಆಧಾರವೂ ಇಲ್ಲ. ಅಲ್ಲದೆ, ಡಾಕ್ಟರುಗಳು ಆಕೆಯನ್ನು ನೋಡಿ ಹೀಯಾಳಿಸಿದ್ದಾರೆ, ನಕ್ಕಿದ್ದಾರೆ. ಡಾ॥ ತಿಮ್ಮಾರೆಡ್ಡಿ ಒಬ್ಬರೇ ಅಲ್ಲ, ಅವರ ಇತರ ಸ್ನೇಹಿತರು ಇವಳನ್ನು ಹೀಯಾಳಿಸಿ ನಕ್ಕಿದ್ದಾರೆ. ವಿಕ್ಟೋರಿಯಾ ಆಸ್ಪತ್ರೆಯಲ್ಲಿರತಕ್ಕ ಡಾಕ್ಟರುಗಳು ಈ ರೀತಿಯಾಗಿ ಕೆಲಸ ಮಾಡುವುದಾದರೆ ಸರ್ಕಾರದವರು ಇವರ ಬಗ್ಗೆ ಎಚ್ಚರಿಕೆಯನ್ನು ವಹಿಸಬೇಕಾಗುತ್ತದೆ. ೧೬ ವರ್ಷದ ಒಬ್ಬ ಅಮಾಯಿಕ ಹೆಣ್ಣುಮಗುವಿಗೆ ಈ ಸ್ಥಿತಿಯಾದರೆ, ಬೇರೆಯವರು ಯಾವರೀತಿಯಿಂದ ಅಲ್ಲಿಗೆ ಔಷಧಿ ಮತ್ತು ತಮ್ಮ ಖಾಯಿಲೆಗಳನ್ನು ವಾಸಿ ಮಾಡಿಕೊಳ್ಳುವುದಕ್ಕೆ ಹೋಗಬಹುದು ಎನ್ನುವುದನ್ನು ತಾವು ಯೋಚನೆ ಮಾಡಬೇಕು. ಆ ಹೆಣ್ಣು ಮಗುವಿಗೆ ಪ್ರಾಣ ಭಯ ಅಲ್ಲ, ಮಾನ ಭಯ ಇತ್ತು ಎಂದು ಆಕೆಯ ಪತ್ರದಿಂದ ಯಾರಿಗಾದರೂ ಗೊತ್ತಾಗುತ್ತದೆ. ಮಾನ್ಯ ಮಂತ್ರಿಗಳು ಅಲ್ಲಿರತಕ್ಕ ಸೂಪರಿಂಟೆಂಡಂಟ್ ಅವರನ್ನು ಕರೆಯಿಸಿ, ವಿಚಾರ ಮಾಡಿ ಇದರ ಬಗ್ಗೆ ವಿಚಾರಣೆ ಮಾಡಂತಂತೆ ಆಜ್ಞೆ ಮಾಡಬೇಕು. ಈಗ ಮಾನ್ಯ ಮಂತ್ರಿಗಳು ಯಾವ ಕ್ರಮ ತೆಗೆದುಕೊಂಡಿದ್ದಾರೆಂದು ನಾನು ಕೇಳಬಯಸುತ್ತೇನೆ.

SRI M. MALLAPPA.—Sir, these cases are under investigation pending for final disposal. This is point No. 1. Secondly, the Hon'ble Member alleged that the statement made to the effect that she was suffering from mental agony is not true. But her own brother went to the police station and made a statement to the effect that she was suffering from mental agony. As stated by Hon'ble Member that she is aged about 16 years is wrong. She is aged about 23 years. Both of them fell in love and he promised to marry her. But something untoward thing has happened and both of them are dead. We can pray rest for the passing soul. What more can be done now ? She has written a letter which runs to nearly 8 pages and police have taken up investigation. If the Hon'ble Member wishes to know the contents of letter, I will place the papers on the table of the House. When the matter is under investigation, how can I make a statement ?

ಶ್ರೀಮತಿ ಎಸ್. ಪ್ರಮಿಳ.—ಇದು ಬಹಳ ಗಂಭೀರವಾದ ಪ್ರಶ್ನೆ, ಮಾನ್ಯಮಂತ್ರಿಗಳಲ್ಲಿ ಅವಳಿಗೆ ಮೆಂಟಲ್ ಟ್ರಬಲ್ ಇತ್ತು ಎನ್ನುವುದಕ್ಕೆ ದಾಖಲೆ ಏನಾದರೂ ಇದೆಯೇ ಆ ಹುಡುಗಿಯ ಅಣ್ಣ ಬಂದು ನನ್ನಪತ್ರಿರ ಹೇಳಿಕೊಂಡು ಅತ್ತಾಗ ನಾನು ಆ ಹುಡುಗಿ ಬರೆದಿರುವ ಪತ್ರವನ್ನು ಪೋಲೀಸ್ ಸ್ಟೇಷನ್‌ಗೆ ಕೊಡಲು ತಿಳಿಸಿದೆ. ಅವರು ತೆಗೆದುಕೊಳ್ಳುವುದಿಲ್ಲ ಎಂದು ಹೇಳಿದಾಗ ನಾನು ನನ್ನ ಲೆಟರ್‌ಹೆಡ್‌ನಲ್ಲಿ ಬರೆಯಿಸಿದ್ದೇನೆ. ಇಲ್ಲಿ ಯಾರು ತಪ್ಪಿತಸ್ಥರು ಇದ್ದಾರೆ. ಅವರಿಗೆ ತಕ್ಕ ಶಿಕ್ಷೆಯಾಗಲೇಬೇಕು. ಈ ವಿಷಯ ಮಾನ್ಯ ಮಂತ್ರಿಗಳಿಗೂ ಕೂಡ ಗೊತ್ತಿದೆ. ಹೆಣ್ಣು ಮಕ್ಕಳಿಗೆ ರಕ್ಷಣೆ ಕೊಡಬೇಕಾದ್ದು ಸರ್ಕಾರದ ಕರ್ತವ್ಯ. ಪೋಲೀಸರೇ ಹುಡುಗಿಯ ಅಣ್ಣನನ್ನು ಸ್ಟೇಷನ್‌ಗೆ ಕರೆಯಿಸಿಕೊಂಡು ಸ್ಟೇಟ್‌ಮೆಂಟ್ ಕೊಡು ಎಂದು ಈ ರೀತಿಯಾಗಿ ತೆಗೆದುಕೊಂಡಿದ್ದಾರೆ. ಮೆಂಟಲ್ ಟ್ರಬಲ್ ಇದ್ದುದು ಈ ಹುಡುಗಿಗೆ ಅಲ್ಲ, ಈ ಡಿಪಾರ್ಟಮೆಂಟಿನಲ್ಲಿರತಕ್ಕ ಡಾಕ್ಟರುಗಳಿಗೆ ಇದ್ದುದು ಈ ಟ್ರಬಲ್ ಅಮಿನಿಯಾ ಟ್ರಬಲ್ ಇದ್ದುದರಿಂದಲೇ ಅವರು ಈ ಹುಡುಗಿಯನ್ನು ಆಕ್ರಮವಾಗಿ ಪಿ. ಜಿ. ಕ್ವಾರ್ಟರ್ಸ್‌ಗೆ ಕರೆದುಕೊಂಡು ಹೋಗಿ ಅಕ್ರಮ ಸಂಭೋಗ ನಡೆಸಿದ್ದಾರೆ, ಇದರ ಬಗ್ಗೆ ಮಾನ್ಯ ಮಂತ್ರಿಗಳು ವಿಚಾರಣೆ ಮಾಡಿ ವರದಿಯನ್ನು ಸಭೆಯ ಮುಂದೆ ಇಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಪಿ.ಜಿ ಕ್ವಾರ್ಟರ್ಸ್ ಡಾಕ್ಟರ್‌ಗೆ ಕೊಡುವುದು ಈ ರೀತಿಯಾಗಿ ಮಾಡುವುದಕ್ಕಲ್ಲ. ಈ ವಿಷಯದಲ್ಲಿ ಮಾನ್ಯ ಮಂತ್ರಿಗಳು ಏನಾದರೂ ಯೋಜನೆ ಮಾಡಿದ್ದಾರೆಯೇ ? ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆಂದು ನಾನು ಕೇಳಬಯಸುತ್ತೇನೆ.

SRI M. C. NANAIAH.—Mr. Speaker, Sir, this is a unfortunate incident arising out of pure and simple love. I know the background of incident and I am the first man to condemn the forcible molestation

by anybody. The Hon'ble Minister has given a statement that they were together for sometime. On account of this there were so many social obligation rests on both of them. Now both of them are dead and I think by this time both must be taking rest. If there were to be any further investigation, I feel investigation should be conducted over the dead bodies. I think the Hon'ble Member will agree with me.

ಶ್ರೀ ಭೀಮಣ್ಣ ಖಂಡ್ರೆ.—ಮಾನ್ಯ ಸದಸ್ಯರಿಬ್ಬರು ಪ್ರಶ್ನೆ ಕೇಳಿದ್ದಾರೆ. ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಿದ್ದಾರೆ. ನಾನಯ್ಯನವರು ಈ ವಿಚಾರದಲ್ಲಿ ಉತ್ತರ ಕೊಡುವುದಕ್ಕೆ ಏನು ಸಂಬಂಧ ಇದೆ?

ಶ್ರೀ ವಿ. ಎಸ್. ಕೌಜಲಗಿ.—ಪ್ರೇಮ ಪತ್ರ ಯಾರಿಗೆ ಯಾವ ಸಂದರ್ಭದಲ್ಲಿ ಬರೆದರು. ಸಾಧಾರಣವಾಗಿ ಪ್ರೇಮ ಪತ್ರ ಗೌಪ್ಯವಾಗಿ ಇಡುವಂತಹ ವಿಷಯವಲ್ಲವೆ?

ಶ್ರೀಮತಿ ಎಸ್. ಪ್ರಮೀಳ.—ಅಧ್ಯಕ್ಷರೆ, ಇದು ಪ್ರೇಮ ಪ್ರಕರಣ ಅಲ್ಲ ಸ್ವಾಮಿ, ಇದು ಸಾವಿನ ದಾರಣ ಪ್ರಕರಣ. ಆಕೆಯನ್ನು ಬಲತ್ಕಾರವಾಗಿ ಕರೆದುಕೊಂಡು ಹೋಗಿ ಆಕೆಗೆ ಮೋಸ ಮಾಡಿ: ಪಿ.ಜಿ. ಕ್ವಾರ್ಟರ್ಸ್‌ಗೆ ಕರೆದುಕೊಂಡು ಹೋಗಿ ಆಕೆ ಎಷ್ಟು ಹೇಳಿದರು ಕೇಳದೆ ಬಲವಂತವಾಗಿ ಎರಡು ಬಾರಿ ಸಂಭೋಗ ಮಾಡಿದ್ದಾರೆ. ಬೇರೆ ಡಾಕ್ಟರುಗಳು ಆ ಸನ್ನಿವೇಶವನ್ನು ನೋಡಿ ಸಕ್ತಿದ್ದಾರೆ. ಕೊನೆಗೆ ಆಕೆ ಇನ್ನು ಏನು ನನ್ನ ಹಾಳು ಮಾಡಿದೆ ನನ್ನ ಮದುವೆ ಆದರು ಮಾಡಿಕೋ ಅಂದು ಹೇಳಿದ್ದಾಳೆ.

ಅಧ್ಯಕ್ಷರು.-- ಹೊಸ ವಿಷಯ ಹೇಳಿ.

ಶ್ರೀಮತಿ ಎಸ್. ಪ್ರಮೀಳ.—ಯಾರೋ ಮಿತ್ರರು ಇದು ಪ್ರೇಮ ಪ್ರಕರಣ ಎಂದು ಹೇಳಿದರು, ಇದು ಪ್ರೇಮ ಪ್ರಕರಣ ಅಲ್ಲ ಸ್ವಾಮಿ. ಇದು ಬಲವಂತವಾಗಿ ಮಾಡಿದ್ದು. ಇವತ್ತು ಇಬ್ಬರೂ ಸತ್ತು ಹೋಗಿದ್ದಾರೆ ಅದಕ್ಕೆ ನಮಗೆ ಏನು ಸಂಬಂಧ ಇಲ್ಲ ಎಂದರೆ ಹೇಗೆ? ಇದು ಮಾನವೀಯತೆಯ ಪ್ರಶ್ನೆ. ಸರ್ಕಾರದಲ್ಲಿರುವ ಅಧಿಕಾರಿಗಳು ಹೆಣ್ಣುಮಕ್ಕಳಿಗೆ ಮುಂದೆ ಈ ರೀತಿ ಮಾಡಬಾರದು ಎನ್ನುವ ಉದ್ದೇಶದಿಂದ ಈ ಮಾತು ಹೇಳುತ್ತಿದ್ದೇನೆ. ಮುಂದೆ ಈ ರೀತಿಯ ಅನಾಹುತಗಳು ಆಗುವುದನ್ನು ತಪ್ಪಿಸಬೇಕೆಂದು ಹೇಳುತ್ತಿದ್ದೇನೆ. ಈ ವಿಚಾರವನ್ನು ಯಾರೂ ಕೂಡ ಆಷ್ಟು ಲಘುವಾಗಿ ಭಾವಿಸಬಾರದು. ಅಧ್ಯಕ್ಷರೇ, ಸುಮಾರು ೧೦ ಪುಟದಲ್ಲಿ ಪತ್ರ ಬರೆದಿದ್ದಾಳೆ ತನ್ನ ದೇಹಕ್ಕೆ ಏನೇನು ಆಘಾತವಾಗಿದೆ ಯೆಂದು ಇದರಲ್ಲಿ ವಿವರವಾಗಿ ಹೇಳಿದ್ದಾಳೆ. ಬಹುಶಃ ಮಂತ್ರಿಗಳಿಗೂ ಪತ್ರ ಬರೆದಿರಬಹುದು. ಇದರಲ್ಲಿ ಇನ್ನೊಂದು ಸೂಕ್ಷ್ಮವಾದ ವಿಷಯ ಇದೆ. ಆಕೆ ತನ್ನ ತಂದೆಯನ್ನು ಡ್ರೆಸ್ ಮಾಡಿಸುವುದಕ್ಕೆ ಕರೆದುಕೊಂಡು ಹೋದರೆ ಅಲ್ಲಿ ವಾರ್ಡ್‌ಬಾಯ್ ಇತರೆ ಯಾರು ಇರುವುದಿಲ್ಲ. ಅಲ್ಲಿ ಡಾಕ್ಟರ್ ಒಬ್ಬರೇ ಇರುವುದಕ್ಕೆ ಅವಕಾಶ ಕೊಟ್ಟಿದ್ದಾರೆ. ಈ ರೀತಿ ಅವಕಾಶ ಕೊಟ್ಟಿರುವುದರಿಂದಲೇ ಅಲ್ಲಿ ಕಾಮಕೇಳಿ ನಡೆಯಲು ವುದಕ್ಕೆ ಅವಕಾಶವಾಗಿದೆಯೆಂದು ಹೇಳುತ್ತಿದ್ದೇನೆ. ಇದರ ಬಗ್ಗೆ ತನಿಖೆ ಮಾಡಬೇಕು. ಇಬ್ಬರೂ ಸತ್ತು ಹೋಗಿದ್ದಾರೆಂದು ಇದನ್ನು ಆಷ್ಟಕ್ಕೆ ಮುಚ್ಚುವುದಕ್ಕೆ ಪ್ರಯತ್ನ ಮಾಡಬಾರದೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಪ್ಪ.— ಸಾಮಾನ್ಯವಾಗಿ ವಯಸ್ಸಿಗೆ ಬಂದ ಗಂಡುಮಕ್ಕಳು ಮತ್ತು ಹೆಣ್ಣು ಮಕ್ಕಳು ಒಂದು ಕಡೆ ಸೇರಿದಾಗ ಇಂತಹ ಆಚಾತುರ್ಯ ನಡೆಯುತ್ತೆ.

(೭-೮ ಮಂದಿ ಸದಸ್ಯರು ಒಟ್ಟಿಗೆ ನಿಂತು ಗಲಭೆ ಮಾಡಿದರು)

ನಮ್ಮ ಚಿಕ್ಕಮಗಳೂರು ಜಿಲ್ಲೆಯಲ್ಲಿ ಇಂಥದೇ ಒಂದು ಪ್ರಕರಣ ನಡೆದಿದೆ. ಒಳ್ಳೆಯ ಬರಹಗಾರರು ಇದನ್ನು ಉಪಯೋಗಿಸಿಕೊಳ್ಳುತ್ತಾರೆ. ಈ ರೀತಿಯ ಆಚಾತುರ್ಯ ಆಗಿದ್ದಕ್ಕೆ ನಾವುಗಳೆಲ್ಲಾ ಸಂತಾಪ ಪಡಬೇಕಾಗುತ್ತದೆ ಸ್ವಾಮಿ ಆಕೆಗೆ ಒಂದ್ದಿ ಸರಿಯಿರಲಿಲ್ಲ ಅನ್ನುವುದು ಪೋಲೀಸಿನವರ ಎದುರಿಗೆ ಹೇಳಿದಂತಹ ಮಾತುಗಳು ಇಲ್ಲಿ ರೆಕಾರ್ಡ್ ಮಾಡಿದ್ದಾರೆ, ಆದರಿಂದ ಗೊತ್ತಾಗುತ್ತದೆ. ಅಲ್ಲದೆ ವಿಕ್ಟೋರಿಯಾ ಆಸ್ಪತ್ರೆಗೆ ಹೆಣ್ಣು ಮಕ್ಕಳು ಹೋಗುವುದೇ ಕಷ್ಟವಾಗಿದೆ ಎಂದು ಹೇಳಿದ್ದಾರೆ. ಸ್ವಾಮಿ, ಪ್ರತಿ ನಿತ್ಯ ೫೦೦ ಜನ ರೋಗಿಗಳು (ಹೆಂಗಸರು) ಹೋಗುತ್ತಿದ್ದಾರೆ. ಹಿಂದೆ ಯಾವಾಗಲು ಕೂಡ ಸಾರ್ವಜನಿಕವಾಗಿ ಇಂತಹ ಅಪವಾದ ಬಂದಿರಲಿಲ್ಲ. ಇವತ್ತು ಈ ಆಚಾತುರ್ಯಕ್ಕೆ ಇಬ್ಬರೂ ಕಾರಣ,

ಲೀಲಾವತಿಗೆ ವಯಸ್ಸು ೨೩. ಡಾಕ್ಟರಿಗೆ ಮದುವೆ ಆಗಿತ್ತೋ ಏನೋ ಇದು ಇನ್ನೂ ತನಿಖೆ ಆಗಬೇಕು. ವಿಚಾರಣೆ ಆದಮೇಲೆ ಯಾರು ಶಾಮೀಲು ಆಗಿದ್ದರೂ ಎಲ್ಲವೂ ಗೊತ್ತಾಗುತ್ತದೆ. ಸರ್ಕಾರ ತಪ್ಪಿ ತಸ್ಥರು ಯಾರೇ ಇದ್ದರೂ ಅವರ ಮೇಲೆ ಉಗ್ರಕ್ರಮ ತೆಗೆದುಕೊಳ್ಳುವುದಕ್ಕೆ ಹಿಂಜರಿಯುವುದಿಲ್ಲ ಎಂದು ಹೇಳುತ್ತೇನೆ. ದಯವಿಟ್ಟು ಈ ಚರ್ಚೆಯನ್ನು ಇಲ್ಲಿಗೇ ನಿಲ್ಲಿಸಬೇಕೆಂದು ತಮ್ಮಲ್ಲಿ ಪ್ರಾರ್ಥಿಸುತ್ತೇನೆ.

ಶ್ರೀ ಕೆ. ಎಂ. ತಮ್ಮಯ್ಯ.— ಸ್ವಾಮಿ, ಇಲ್ಲಿ ಗಂಡು ಸತ್ತುಹೋಗಿದೆ, ಹೆಣ್ಣು ಸತ್ತುಹೋಗಿದೆ ಯೆಂದು ಇದನ್ನು ಮುಚ್ಚಲಿಕ್ಕೆ ಪ್ರಯತ್ನ ಮಾಡಬಾರದು. ಈ ಹುಡುಗಿಗೆ ಮೆಂಟಲ್ ಸರಿಯಿರಲಿಲ್ಲ ಎಂದು ಹೇಳಿದ್ದಾರೆ, ಯಾವ ಆಧಾರದ ಮೇಲೆ ಹೇಳಿದ್ದಾರೆ? ಮಾನ್ಯ ಮಂತ್ರಿಗಳು ಸಾಮಾನ್ಯವಾಗಿ ಇದು ನಡೆಯುತ್ತದೆಂದು ಅವರೇ ಒಪ್ಪಿಕೊಂಡಿರುತ್ತಾರೆ. ಮುಂದೆ ಇಂಥಾದ್ದು ನಡೆಯದಂತೆ ಸರಿಪಡಿಸು ವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಗಟ್ಟಿ ಚಂದ್ರಶೇಖರ್.— ಶ್ರೀಮತಿ ಪ್ರಮೀಳಾರವರು ತಂದಿರತಕ್ಕ ವಿಚಾರ ಬಹಳ ಗಹನ ವಾದುದು. ಮಾನ್ಯ ಮಂತ್ರಿಗಳು ಈಗಾಗಲೇ ಉತ್ತರ ಕೊಟ್ಟಿದ್ದಾರೆ. ಮಹಾಕವಿ ಕಾಳಿದಾಸ ಒಂದು ಮಾತು ಹೇಳಿದ್ದಾನೆ. 'ಕಾಮಾತುರಾಣಂ ನಭಯಂನಲಜ್ಜ' ಎಂದು ಅವರಿಗೆ ದೈವಸಂಕಲ್ಪ ಇಲ್ಲಿ ವಿವಾಹ ವಾಗಬೇಕೆಂದು ಇತ್ತು, ಇಬ್ಬರ ಆತ್ಮಕ್ಕೂ ಶಾಂತಿ ಸಿಗಲಿ ಎಂದು ಹಾರೈಸೋಣ.

ಶ್ರೀ ಎಸ್.ಆರ್. ಬೊಮ್ಮಾಯಿ.—ಶ್ರೀಮಾನ್ ಗಟ್ಟಿ ಚಂದ್ರಶೇಖರ್‌ರವರು ಕಾಳಿದಾಸನ ಒಂದು ಪದ್ಯವನ್ನು ಕೋಟ್ ಮಾಡಿ ಹೇಳಿದರು. ಹಾಗಾದರೆ ಮಂತ್ರಿಗಳಿಗೂ ಸಹ ಅವರ ವಯಸ್ಸಿನಲ್ಲಿ ಈ ರೀತಿಯಾದಂಥಾ ಘಟನೆಗಳು ನಡೆಯುತ್ತಾ ಇವೆಯೇನು? ಸರ್ಕಾರದ ಮಂತ್ರಿಗಳು ಉತ್ತರ ಕೊಡು ವಾಗ ಆಸ್ಪತ್ರೆಗೆ ಸಂಬಂಧಪಟ್ಟಂತೆ ಇರುವುದನ್ನು ಹೇಳಬೇಕೇ ವಿನಾ ಹೊರಗಡೆ ಆಗುತ್ತಾ ಇರುವುದನ್ನು ಹೇಳಬಾರದು. ಅವರ ಉತ್ತರ ಈ ಆಸ್ಪತ್ರೆಗೆ ಸಂಬಂಧಪಟ್ಟಂತೆ ರಿಸ್ಟ್ರಿಕ್ಟ್ ಆಗಿ ಉತ್ತರ ಕೊಡುವುದು ಒಳ್ಳೆಯದು.

ಶ್ರೀ ಎಂ. ಮಲ್ಲಪ್ಪ.— ನಾವು ಗಾಯದ ಮೇಲೆ ಬರೆ ಎಳೆಯುವುದು ಬೇಡ. ನಾವು ಆ ಮಾತು ಗಳನ್ನಾಡಿದರೆ ಆವರಿಬ್ಬರ ಮನೆಯವರಿಗೂ ಎಷ್ಟು ದುಃಖ ವಾಗುತ್ತದೆ ಅನ್ನುವುದನ್ನು ಯೋಚನೆ ಮಾಡಿ. ಹೊರಗಡೆ ಈ ರೀತಿ ಬೇಕಾದಷ್ಟು ನಡೆಯುತ್ತದೆ. ಆಸ್ಪತ್ರೆಯಲ್ಲಿ ನಡೆದುದನ್ನೇ ನಾನು ಹೇಳುತ್ತಾ ಇದ್ದೇನೆ. ನಾನು ಹೇಳಿದ್ದು ಏನೆಂದರೆ ಈ ಬಗ್ಗೆ ಊಹೆ ಮಾಡಿ ಹೇಳುವುದು ಬೇಡ. ಅವರ ಅಣ್ಣನೇ ಪೋಲೀಸ್ ಸ್ಟೇಷನ್‌ಗೆ ಬಂದು ಮೆಂಟಲ್ ಅಗೋನಿ ಇತ್ತು ಎಂದು ಸ್ಟೇಟ್‌ಮೆಂಟ್ ಕೊಟ್ಟಿ ದ್ದಾರೆ.

ಶ್ರೀ ಕೆ. ಎಂ. ತಮ್ಮಯ್ಯ.— ಅವರ ಅಣ್ಣನನ್ನು ಕರೆದುಕೊಂಡು ಹೋಗಿ ಹಾಗೆ ಬರೆಸಿಕೊಂಡಿ ದ್ದಾರೆ.

ಶ್ರೀ ಎಂ. ಮಲ್ಲಪ್ಪ.—ಈಗ ಹೇಗಾದರೂ ಇಬ್ಬರೂ ಸತ್ತು ಹೋಗಿದ್ದಾರೆ. ಯಾರ ಮೇಲೆ ಈ ದೂರನ್ನು ಬರೆದುಕೊಳ್ಳಬೇಕು ಹೇಳಿ. ಇದನ್ನು ಇಷ್ಟಕ್ಕೇ ನಿಲ್ಲಿಸಿದರೆ ಒಳ್ಳೆಯದು.

ಶ್ರೀ ಕೆ.ಎಂ. ತಮ್ಮಯ್ಯ.—ಮಾನ್ಯ ಮಂತ್ರಿಗಳು ಹೇಳುವ ಮಾತುಗಳು ಸರಿಯೇ ನೋಡಿ.

SMT. B. SUMATI MADIMAN.— Mr. Speaker Sir, I am sure all the hon. members have listened to the discussions now. I have a feeling that if anybody thinks that way I am very sorry. They have been quoting Kalidasa and other poets. They have described only about real and true love and this is not that sort of love. I would request the Minister to see that further protection is given to women. These incidents have happened in the past and they will occur in future. I request the Government to give protection to every woman and in every department. Thank you.